ಆರೋಗ್ಯ
ಕನ್ನಡಪ್ರಭ
ಬುಧವಾರ 10.3.2010

2 ಗ್ಲಾಕೋಮ
3 ಕೃಷಿ ಪ್ರಭ ಪರಿಮಳದ ಪಾಯಿಂಟ್
4 ಪ್ರವಾಸ ಪ್ರಭ ಅಂಬರದ ಅರಮನೆ



# ಒಗಟೇನೂ ಅಲ್ಲ!

## ಎಮರ್ಜೆನ್ಸಿ ಏನೆಂದು ತಿಳಿಯಿರಿ

ಡಾ| ವೆಂಕಟೇಶ್ ಎಂ.ರಾವ್

ಹಲವಾರು ಕಾಯಿಲೆಗಳ ದುಷ್ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಇರುವ ಸೂತ್ರ ರೋಗಲಕ್ಷಣಗಳನ್ನು ತಿಳಿಯುವುದು. ಇದರಿಂದ ಆಗುವ ಅನುಕೂಲವೆಂದರೆ ರೋಗವನ್ನು ತಡೆಯಬಹುದು. ಹಲವು ತೊಂದರೆಗಳ ರೋಗಲಕ್ಷಣಗಳನ್ನು ತಿಳಿಯುವುದು ಅಂಥ ಕಷ್ಟಕರವಲ್ಲ, ಹಾಗೆ ಒಗಟೇನೂ ಅಲ್ಲ. ಅದಕ್ಕಾಗೇ ಇಲ್ಲಿ ಕೆಲವು ಎಮರ್ಜೆನ್ಸಿಗಳ ಪಟ್ಟಿ ಮಾಡಲಾಗಿದೆ. ನೀವು ವೈದ್ಯರನ್ನು ತುರ್ತಾಗಿ ಭೇಟಿ ಮಾಡಬೇಕಾದ ಸಂದರ್ಭಗಳಿವು.

### 1. ದೃಷ್ಟಿಯ ತೊಂದರೆಗಳು

ಇದ್ದಕ್ಕಿದ್ದಂತೆ ದೃಷ್ಟಿಯಲ್ಲಿ ಬದಲಾವಣೆ, ಜೊತೆಗೆ:

- ತೀವ್ರವಾದ ನೋವು ಅಥವಾ ಇರಿಟೇಷನ್
- ಕಣ್ಣಿನ ಹೊರಗೆ ಅಥವಾ ಸುತ್ತ ಊತ ಅಥವಾ ಕೆಂಪುಬಣ್ಣ
- ಕಣ್ಣಿನಿಂದ ರಕ್ತ ಅಥವಾ ಕೀವು ಹೋಗುತ್ತಿದ್ದರೆ
- ವಾಕರಿಕೆ ಅಥವಾ ವಾಂತಿ
- ಎರಡೆರಡು ಕಾಣುವುದು ಅಥವಾ ದೃಷ್ಟಿಹೀನತೆ
- ಇದ್ದಕ್ಕಿದ್ದಂತೆ ಕಣ್ಣ ಮುಂದೆ ಏನೋ ತೇಲಿದಂತೆ, ಜೊತೆಗೆ ಬೆಳಕು ಫ್ಲ್ಯಾಷ್ ಆದಂತೆ ಇರಬಹುದು ಅಥವಾ ಇಲ್ಲದಿರಬಹುದು.

### 2. ಪಾದದ ಊತ ಅಥವಾ ಕಾಲಿನ ಊತ

- ಕಾರಣ ಇರದೇ ನೋವಿನಿಂದ ಕೂಡಿದ ಪಾದ ಅಥವಾ ಕಾಲಿನ ಊತ
- ಊದಿರುವ ಜಾಗ ಬೆಚ್ಚಗೆ, ಕೆಂಪು ಮತ್ತು ಉರಿಯೂತದಂತಿದೆ
- ಊತದ ಜೊತೆಗೆ ಜ್ವರವೂ ಇದೆ

### 3. ಪಾದದ ನೋವು

ಪಾದ:

- ಗಾಯ / ಅಪಘಾತದ ನಂತರ ಊದಿದ್ದರೆ
- ಬಿಸಿ ಮತ್ತು ಉರಿಯೂತ ಅಥವಾ ಜ್ವರ ಇದೆ
- ವಕ್ರವಾಗಿದೆ ಅಥವಾ ಜಾಗದಲ್ಲಿ ವ್ಯತ್ಯಾಸವಾದಂತೆ ಬಾಗಿದೆ
- ತೀವ್ರನೋವಿನಿಂದ ನಿಮಗೆ ಅದನ್ನು ಚಲಿಸಲಾಗುತ್ತಿಲ್ಲ
- ಗಾಯವಾದ 72 ಗಂಟೆ ನಂತರ ಭಾರ ಬಿಡಲು ಆಗುತ್ತಿಲ್ಲ

### 4. ತಲೆಸುತ್ತು

ತಲೆಸುತ್ತಿನ ಜೊತೆ:

- ತಲೆ ಅಥವಾ ಎದೆನೋವು ಉಸಿರಾಡಲು ಕಷ್ಟ
- ಜೋಮು ಅಥವಾ ದುರ್ಬಲತೆ ಮೂರ್ಛೆ
- ಮಬ್ಬಾಗಿ ಅಥವಾ ಎರಡೆರಡು ಕಾಣಿಸುವುದು
- ಅನಿಯಮಿತವಾಗಿ ಎದೆಬಡಿತ ಗೊಂದಲ ಅಥವಾ ಮಾತಾಡಲು ಕಷ್ಟ ವಾಕರಿಕೆ ಅಥವಾ ವಾಂತಿ

### 5. ಬೆನ್ನುನೋವು

ಬೆನ್ನುನೋವು :

- ಬಿದ್ದು ಅಥವಾ ಬೆನ್ನಿಗೆ ಏಟಾಗಿ ಕಾಣಿಸಿದ್ದರೆ
- ಒಂದು ಅಥವಾ ಎರಡು ತೋಳಿನಲ್ಲಿ / ಕಾಲಿನಲ್ಲಿ ದುರ್ಬಲತೆ ಅಥವಾ ಜೋಮು
- ಹೊಸತಾಗಿ ಕಾಣಿಸಿದೆ, ಜೊತೆಗೆ ಕಾರಣವಿರದೆ ಜ್ವರ
- ಗಾಯವಾದ ನಂತರ ಕತ್ತಿನಿಂದ ಶುರುವಾಗಿ ತೋಳು ಅಥವಾ ಕಾಲಿಗೆ ಹೋಗುತ್ತಿದ್ದರೆ
- ಇದ್ದಕ್ಕಿದ್ದಂತೆ ಮಲಮೂತ್ರ ವಿಸರ್ಜನೆಯ ಮೇಲೆ ನಿಯಂತ್ರಣ ಇಲ್ಲದಿದ್ದರೆ
- ನಿಮ್ಮನ್ನು ನಿದ್ರೆಯಿಂದ ಎಬ್ಬಿಸುತ್ತದೆ / ರಾತ್ರಿ ಅಥವಾ ವಿಶ್ರಾಮದಲ್ಲಿಯೂ ವಿಪರೀತವಾಗುತ್ತಿದೆ.

### 6. ಕತ್ತುನೋವು

ತೀವ್ರವಾಗಿದ್ದರೆ

- ಅಪಘಾತ ಅಥವಾ ಗಾಯದ ನಂತರ ಕಾಣಿಸಿದ್ದರೆ
- ಕೈಕಾಲುಗಳಲ್ಲಿ ನೋವು, ದುರ್ಬಲತೆ ಅಥವಾ ಜೋಮು

2ನೇ ಪುಟಕ್ಕೆ









